ಬಂದಿದ್ದ ವೃದ್ಧ ಸೈನಿಕನ ಕಥೆಗಳನ್ನು ಕೇಳಿದಾಗಲೆಲ್ಲ ಅವನಲ್ಲೂ ಯುದ್ಧದಲ್ಲಿ ಪಾಲ್ಗೊಳ್ಳುವ ಕನಸು ಬೀಳುತ್ತಿತ್ತು. ಅವನ ಕನಸುಗಳಲ್ಲಿ ಯುದ್ಧ ಎಂದರೆ ಜಯಘೋಷ, ಧೈರ್ಯ, ಶೌರ್ಯ. ಆದರೆ ಇಂದು ಎದುರಿಗೇ ತಮ್ಮವರನ್ನು ಕಳೆದುಕೊಳ್ಳುತ್ತಿರುವ ಈ ಕ್ರೂರ ಆಟದಲ್ಲಿ, ಆರು ಏಳು ವರ್ಷಗಳಲ್ಲಿ ಯುದ್ಧವೇ ಅವನಿಗೆ ಬೇಸರವಾಗಿ, ಭಾರವಾಗಿ, ಬಾಧೆಯಾಗಿ ಬದಲಾಗಿತ್ತು. ಇಂದು ಅದೇ ಯುದ್ಧ ಅವನ ಕೈಗಳಲ್ಲಿ ರಕ್ತದ ಕಲೆಗಳನ್ನು ಆರಲು ಬಿಡುತ್ತಲೇ ಇರಲಿಲ್ಲ.

'ಅಮ್ಮಾ, ನೀನು ಚಿಂತಿಸಬೇಡ, ನಾನು ಖಂಡಿತಾ ಮರಳುತ್ತೇನೆ' ಎಂದು ತನ್ನಷ್ಟಕ್ಕೆ ತಾನು ನಿಧಾನವಾಗಿ ಗುನುಗಿದನು. ಅಷ್ಟರಲ್ಲಿ ಭೂಮಿ ಕಂಪಿಸಿದಂತೆ ಶಬ್ದ. ಮತ್ತೆ ಮರಣದ ರೆಕ್ಕೆಗಳ ಹಾರಾಟ. ಮತ್ತೆ ಕೆಂಪು ಬೆಳಕು. ಆ ಕ್ಷಣದಲ್ಲೇ ಅವನು ಕುಳಿತಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಸ್ಫೋಟ. ಒಂದು ತೀವ್ರ ಬೆಳಕು. ಲಿನ್ ಓಡಲು ಪ್ರಯತ್ನಿಸಿದನು. ಆದರೆ ಯಾವುದೋ ಭಾರೀ ಹೊಡೆತ ಅವನನ್ನು ನೆಲಕ್ಕೊರಗಿಸಿತು. ಕಿವಿಯಲ್ಲಿ ಶಬ್ದ ನಿಂತಂತಾಯಿತು. ಕಣ್ಣ ಮುಂದೆ ಹೊಗೆಯ ಹಿಂಡು.

ಅವನು ಎದ್ದು ನಿಲ್ಲಲು ಯತ್ನಿಸಿದನು. ಆದರೆ ಒಂದು ಕಾಲು ಸ್ಪಂದಿಸಲಿಲ್ಲ. ಕೆಳಗೆ ನೋಡಿದಾಗ ರಕ್ತದಲ್ಲಿ ತೇಲುತ್ತಿದ್ದ ಮಣ್ಣು. 'ಥಾವ್!' ಎಂದು ಅವನು ಕೂಗಿದನು, ಆದರೆ ಅವನ ಧ್ವನಿ ಅವನಿಗೇ ಕೇಳಿಸಲಿಲ್ಲ. ಆ ಕ್ಷಣದಲ್ಲಿ ಅವನಿಗೆ ಮತ್ತೆ ತಾಯಿಯ ನೆನಪಾಯಿತು. ಮನೆಯ ಬಾಗಿಲು. ಅವಳು ಕೈಯಲ್ಲಿ ಹಿಡಿದ ದೀಪ. ಸಂಜೆಯ ಬೆಳಕು. 'ಮಗನೆ, ನೀನು ಬರುತ್ತಿಯಾ ಅಲ್ಲವೇ?' ಎಂಬ ಅವಳ ಧ್ವನಿ ಎಲ್ಲಿಂದಲೋ ಕಿವಿಗೆ ಬಿದ್ದಂತಾಯಿತು. ಉಳಿದಿದ್ದ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ, ಹೇಗೋ ತೆವಳುತ್ತಾ ಒಂದು ಮರದ ಕೆಳಗೆ ಬಂದು ತ್ರಾಣವಿಲ್ಲದೇ ಕಣ್ಣು ಮುಚ್ಚಿದನು. ಹುಣ್ಣಿಮೆಯ ಬೆಳಕು ಇನ್ನೂ ನದಿಯ ಮೇಲೆ ಹರಡಿಕೊಂಡಿತ್ತು.

* * *

ಕೆಲ ದಿನಗಳ ಬಳಿಕ ಕಾಡಿನಿಂದ ಬಂದ ಸುದ್ದಿ ಎಲ್ಲರ ಮುಖಗಳ ಮೇಲೆ ಮಂದಹಾಸ ಮೂಡಿಸಿತು. ಗೆರಿಲ್ಲಾ ಪಡೆಗಳು ಪ್ರತಿತಂತ್ರ ಹೂಡಿ, ಮಾನವ ಮೂತ್ರವನ್ನು ಮಡಕೆಗಳಲ್ಲಿ ಸಂಗ್ರಹಿಸಿ ಮರಗಳಿಗೆ ನೇತುಹಾಕಿ ಶತ್ರುಗಳ ಹುಡುಕಾಟವನ್ನು ವಿಫಲಗೊಳಿಸಿದ್ದವು. ಅಂತಿಮವಾಗಿ ಅಮೇರಿಕ ಯುದ್ಧವನ್ನು ಹಿಂತೆಗೆದುಕೊಳ್ಳಬೇಕಾಯಿತು.

ವಿಯೆಟ್ನಾಂ ಅಧ್ಯಕ್ಷರು ಇದನ್ನು ದೇಶಾಭಿಮಾನ, ಸ್ವಾಭಿಮಾನ ಮತ್ತು ಧೈರ್ಯದ ಗೆಲುವೆಂದು ಘೋಷಿಸಿದರು. ನೇರ ಪ್ರಸಾರದಲ್ಲಿ ಬಿತ್ತರಿಸುತ್ತಿದ್ದ ಸುದ್ದಿಯನ್ನು ಕೇಳುತ್ತಾ ಕಣ್ಣುತುಂಬಿಕೊಂಡ ಕಿಮ್‌ನ ಮಗಳು 'ಗೆರಿಲ್ಲಾ' ಎಂದು ನಗುತ್ತಿದ್ದಳು. ಸುದ್ದಿ ಪ್ರಸಾರವಾಗುತ್ತಿದ್ದಂತೆಯೇ ಊರಿನಲ್ಲಿ ಕೆಲವರು ಬೀದಿಗೆ ಓಡಿದರು. ಕೆಲ ಮನೆಗಳಲ್ಲಿ ಹಳೆಯ ಧ್ವಜಗಳನ್ನು ಹೊರತೆಗೆದು ಹಾರಿಸಿದರು. ಮಕ್ಕಳು 'ಗೆಲುವು!' ಎಂದು ಕೂಗುತ್ತಿದ್ದರು. ಕೆಲವು ಕಡೆ ಪಟಾಕಿಗಳ ಶಬ್ದ ಕೇಳಿಸಿತು. ವರ್ಷಗಳ ನಂತರ ಮೊದಲ ಬಾರಿ ಕೆಲ ಮುಖಗಳಲ್ಲಿ ನಿಶ್ಚಿಂತ ನಗು ಮೂಡಿತ್ತು. ಅದನ್ನೆಲ್ಲಾ ನೋಡುತ್ತಾ, ಯುದ್ಧದಲ್ಲಿ ಎಲ್ಲರನ್ನೂ ಕಳೆದುಕೊಂಡು, ಬಾಳಿನ ಇಳಿಸಂಜೆಯಲ್ಲಿ ಒಂದು ಕಣ್ಣು ಕುರುಡಾದ ಪಕ್ಕದ ಮನೆಯ ಅಜ್ಜಿ ತನ್ನಲ್ಲೇ ಹಳಹಳಿಸುತ್ತಿದ್ದಳು 'ಅಯ್ಯೋ ಪೆದ್ದರಾ! ಶ್ರೇಷ್ಠತೆಯ ವ್ಯಸನ ಹಿಡಿದ ಮನುಷ್ಯ ಯುದ್ಧ ನಿಲ್ಲಿಸುವುದಾ! ಒಂದು ಮುಗಿದರೆ ಮತ್ತೊಂದು. ಹೊರಗಿನ ದೇಶಗಳ ಜೊತೆ, ಮನೆಯೊಳಗೇ ತಮ್ಮವರ ಜೊತೆ, ಇಲ್ಲವಾದರೆ...' ಕ್ಷಣಕಾಲ ನಿಂತು ಏನೋ ಯೋಚನೆಯಲ್ಲಿ ಕಳೆದುಹೋದಂತೆ ಮೆಲ್ಲಗೆ 'ತಮ್ಮ ಮನಸ್ಸಿನೊಳಗೇ ಹೋರಾಟ' ಅವಳ ಧ್ವನಿ ನಿಧಾನವಾಗಿ ಕುಂದಿತು. 'ನೋವು ಅನುಭವಿಸುವವರಿಗೆ... ಇದು ನರಕ. ಇನ್ನೊಬ್ಬರಿಗೆ ದೃಶ್ಯಕಾವ್ಯ...' ಅವಳು ಕಾಣದ ಕಣ್ಣಿನಿಂದ ದೂರ ನೋಡುತ್ತ, ಸ್ವಲ್ಪ ಹೊತ್ತು ಮೌನವಾಗಿ 'ಯುದ್ಧ ನಿಂತಿಲ್ಲ ಪೆದ್ದರಾ... ನಿಲ್ಲುವುದೂ ಇಲ್ಲ!'

ಆ ಮಾತುಗಳು ಕಿಮ್‌ನ ಅಂತರಾಳದಲ್ಲಿ ಮತ್ತೇನೋ ಭಯ, ದುಗುಡವನ್ನು ನಿಧಾನವಾಗಿ ಬಿತ್ತುತ್ತಿದ್ದವು. ಅದೇ ಕ್ಷಣದಲ್ಲಿ ಮನೆಬಾಗಿಲಿನ ಬಳಿ ಒಂದು ನೆರಳು ನಿಂತಂತಾಯಿತು. ತಿರುಗಿ ನೋಡಿದರೆ ಕಿರಿಯ ಮಗ ಕಾಡಿನಿಂದ ಕುಂಟುತ್ತಾ ಮನೆಬಾಗಿಲಿನಲ್ಲಿ ನಿಂತಿದ್ದನು. ಅವನ ಕಣ್ಣಲ್ಲಿ ಇದ್ದ ಬಾಲ್ಯದ ಮಿಂಚು ಕಾಡಲ್ಲೇ ಎಲ್ಲೋ ಕಳೆದು ಹೋಗಿತ್ತು. ●